# ಹುಳವೇ ಎಲ್ಲಡಗಿರುವೆ?

ಒಂದು ಬೆಳಿಗ್ಗೆ ಹೂ ಕೀಳುವಾಗ ಈ ಪುಟ್ಟ 'ಕಟ್ಟಿಗೆ ಹೊರೆ' ಕಣ್ಣಿಗೆ ಬಿತ್ತು. ದಾಸವಾಳದ ಸಪೂರ ಟೊಂಗೆಗೆ ತೆಳ್ಳಗಿನ ಜೇಡದ ದಾರದ ತುದಿಗೆ ಈ 'ಹೊರೆ' ನೇತಾಡುತ್ತಿತ್ತು. ಬಿಟ್ಟು ಹೋದ ಹುಳದ ಗೂಡು ಇದಾಗಿರಬಹುದೆಂದು ಮನೆ ಜನರಿಗೆ ತೋರಿಸಲು ತಂದು ಟೇಬಲ್ ಮೇಲಿಟ್ಟು ಒಳ ಹೋದೆ.

ಹತ್ತು ನಿಮಿಷದಲ್ಲಿ ಹೊರ ಬಂದಾಗ ಕಟ್ಟಿಗೆ ಹೊರೆ ಚಲಿಸುತ್ತ ಮುಂದೆ ಹೋಗುತಿತ್ತು. ಒಳಗೆ ಹುಳ ಇದೆ ಅಂತ ಖಾತ್ರಿಯಾಯಿತು. ಹುಳ ಹೊರ ಬರುವುದನ್ನೇ ಕಾಯುತ್ತ ಕುಳಿತೆ. ತುಸು ಹೊತ್ತಿಗೆ ಹುಳವೊಂದು ಮೂತಿ ಹೊರಹಾಕಿತು. ಗೂಡನ್ನು ನಾನು ಒಂಚೂರು ಅಲುಗಾಡಿಸಿದೆ ಬೇಗ ಹೊರಬರಲೆಂದು. ಆದರೆ ಹುಳ ಹೆದರಿ ಮತ್ತಷ್ಟು ಒಳಗೇ ಸೇರಿಕೊಂಡಿತು. ಸ್ವಲ್ಪ ಹೊತ್ತಿನ ನಂತರ ನೋಡಿದಾಗ ಹುಳ ಹೊರ ಬರುತ್ತಲಿತ್ತು. ನನ್ನ ಆಗಮನ ತಿಳಿದು ಒಮ್ಮೆಲೆ ಕೋಪಗೊಂಡು ತನ್ನ ರುದ್ರರೂಪ ತೋರಿಸಿದಾಗ ನಿಜಕ್ಕೂ ನಾನು ಹೆದರಿಬಿಟ್ಟೆ. ಮೈಮೇಲೆ ಹಾರಿ ಕಚ್ಚುವಂತಿದ್ದ ಅದರ ರುದ್ರ ರೂಪ ಕಂಡ ನಾನು ತಕ್ಷಣ ಕಟ್ಟಿಗೆ ಹೊರೆಯಂತಿದ್ದ ಆ ಗೂಡನ್ನು ದೂರದ ಗಿಡದ ಮೇಲಿರಿಸಿ ಬಂದೆ.

**-ಜಯಾ ಯಾಜಿ, ಶಿರಾಲಿ**





# ಉಡುಪಿ ಮಧ್ವ ಸರೋವರದಲ್ಲಿ ಉತ್ಸವ

ಉಡುಪಿಯ ಶ್ರೀ ಕೃಷ್ಣ ಮಠದ ಲಕ್ಷ ದೀಪೋತ್ಸವ ಸಂದರ್ಭದಲ್ಲಿ ಮತ್ತು ಮಕರ ಸಂಕ್ರಾಂತಿಯಂದು ರಾತ್ರಿ ವಿಶೇಷ ಪೂಜೆ ಜರುಗುತ್ತದೆ. ಉತ್ಸವ ಮೂರ್ತಿಯನ್ನು ಸುಂದರವಾಗಿ ನಿರ್ಮಿಸಿದ ರಥದಲ್ಲಿ ಇರಿಸಿ ಮಧ್ವ ಸರೋವರದ ಮಧ್ಯದಲ್ಲಿರುವ ದೀಪಾಲಂಕೃತ ಮಂಟಪಕ್ಕೆ ಸುತ್ತಿಸಲಾಗುತ್ತದೆ. ನಂತರ ಮಂಟಪದಲ್ಲಿ ಕುಳ್ಳಿರಿಸಿ ಪೂಜೆ ಪುನಸ್ಕಾರ ಜರುಗಿಸಲಾಗುತ್ತದೆ.

**-ಲಕ್ಷ್ಮಣ ಶೆಣೈ, ಉಡುಪಿ**

# ಅಪರೂಪದ ರಾಮಪತ್ರೆ

ಪಶ್ಚಿಮ ಘಟ್ಟದಲ್ಲಿ ಮಾತ್ರ ಕಾಣಬಹುದಾದ ಈ ರಾಮಪತ್ರೆ ಗಿಡಗಳು ಕ್ಷೀಣಿಸುತ್ತಿವೆ. ಇಳಿಜಾರಿನ ಜೌಗು ಪ್ರದೇಶದಲ್ಲಿ ಬೆಳೆಯುವ ಈ ಮರಗಳು ಕಾಡುಗಳ್ಳರ ಕೊಡಲಿ ಏಟಿಗೆ ಬಲಿಯಾಗುತ್ತಿವೆ. ಅಪರೂಪದ ವನ ಔಷಧಿಯಾಗಿರುವ ಈ ರಾಮಪತ್ರೆ ಸಾಂಬಾರ ಪದಾರ್ಥಗಳಲ್ಲಿ ಒಂದು.

**-ದತ್ತಾತ್ರೇಯ ಭಟ್ಟ, ಯಲ್ಲಾಪುರ**

